# ಪಾನ್ ಕಾರ್ಡ್: ಆನ್‌ಲೈನ್ ಅಪ್‌ಡೇಟ್ ಮಾಡಿ!

■ ಶಶಿಕುಮಾರ್ ಸಿ.




ಸದ್ಯ ಬ್ಯಾಂಕ್‌ನ ಮೂಲಕ ನಡೆಯುವ ಪ್ರತಿಯೊಂದು ಹಣಕಾಸಿನ ವಹಿವಾಟಿಗೂ ಪಾನ್ ಕಾರ್ಡ್‌ನ ಅಗತ್ಯವಿದೆ. ಪಾನ್ ಕಾರ್ಡ್‌ನೊಂದಿಗೆ ಆಧಾರ್ ಕಾರ್ಡ್ ಸಂಖ್ಯೆಯನ್ನು ಜೋಡಿಸುವ ಪ್ರಕ್ರಿಯೆಯೂ ಪ್ರಗತಿಯಲ್ಲಿದೆ.

ಪಾನ್ ಕಾರ್ಡ್‌ನಲ್ಲಿ ಕಾರ್ಡ್‌ದಾರನ ಹೆಸರು, ತಂದೆಯ ಹೆಸರು, ಹುಟ್ಟಿದ ದಿನಾಂಕ ಸೇರಿದಂತೆ ಯಾವುದೇ ಮಾಹಿತಿ ತಪ್ಪಾಗಿದ್ದರೆ ಅದನ್ನು ಸರಿಪಡಿಸಲು ಈ ಹಿಂದೆ ಆದಾಯ ತೆರಿಗೆ ಇಲಾಖೆ ಹಾಗೂ ಗ್ರಾಹಕ ಸೇವಾ ಕೇಂದ್ರಗಳಿಗೆ ತಿಂಗಳುಗಟ್ಟಲೆ ಅಲೆದಾಡಬೇಕಿತ್ತು. ಆದರೆ ಆದಾಯ ಇಲಾಖೆಯ ತನ್ನ ವೆಬ್ ಪೋರ್ಟಲ್ ಅನ್ನು ಸಂಪೂರ್ಣ ಡಿಜಟಲೀಕರಣಗೊಳಿಸಿದ್ದು, ಇದರಲ್ಲಿ ಪಾನ್ ಕಾರ್ಡ್ ವಿಭಾಗಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಇದರಿಂದಾಗಿ ಆನ್‌ಲೈನ್ ಮೂಲಕವೇ ಪಾನ್ ಕಾರ್ಡ್‌ನಲ್ಲಿ ಮಾಹಿತಿಯ ತಿದ್ದುಪಡಿಯನ್ನು ಗ್ರಾಹಕರು ಸುಲಭವಾಗಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಈ ಮುನ್ನ ಸರ್ಕಾರಿ ಅಧಿಕಾರಿಗಳು, ಕಂಪನಿಗಳ ಉದ್ಯೋಗಿಗಳಿಗೆ ಮಾತ್ರವೇ ಪಾನ್ ಕಾರ್ಡ್ ಹೆಚ್ಚು ಅಗತ್ಯವಾಗಿತ್ತು. ಕ್ರಮೇಣ ಇದು ದೇಶದ ಎಲ್ಲ ಪ್ರಜೆಗೂ ಅತ್ಯಗತ್ಯವಾಗಿದೆ. ಸರ್ಕಾರಿ ಅಧಿಕಾರಿಗಳಿಂದ ಹಿಡಿದು ದಿನನಿತ್ಯ ಕೂಲಿ ಮಾಡುವ ಕಾರ್ಮಿಕರಿಗೂ ಅಗತ್ಯವಾಗಿದೆ. ಇದರಲ್ಲಿನ ಮಾಹಿತಿ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಡಿಟೇಲ್‌ಗಳಿಗೆ ತಾಳೆ ಆಗಬೇಕು. ಇಲ್ಲವಾದಲ್ಲಿ ಬ್ಯಾಂಕ್ ಮೂಲಕ ನಡೆಸುವ ಹಣಕಾಸು ವಹಿವಾಟಿಗೆ ತೊಂದರೆಯಾಗುತ್ತದೆ. ಹೀಗಾಗಿ ಆಧಾರ್ ಕಾರ್ಡ್‌ನ ಮಾಹಿತಿಗೆ ಪಾನ್ ಕಾರ್ಡ್‌ನ ಮಾಹಿತಿಯು ತಾಳೆಯಾಗದೇ ಇದ್ದರೆ ಕೂಡಲೇ ಆನ್‌ಲೈನ್ ಮೂಲಕ ಪಾನ್‌ಕಾರ್ಡ್ ತಿದ್ದುಪಡಿಯನ್ನು ಮಾಡಿಕೊಳ್ಳಬೇಕು.

### ತಿದ್ದುಪಡಿ ಹೇಗೆ?

- ಮೊದಲು ನಿಮ್ಮ ವೆಬ್ ಬ್ರೌಸರಿನಲ್ಲಿ https://www.tinnsdl.com/ ವಿಳಾಸ ನಮೂದಿಸಿ ಓಪನ್ ಮಾಡಿದರೆ ಆದಾಯ ತೆರಿಗೆ ಇಲಾಖೆಯ 'ಟ್ಯಾಕ್ಸ್ ಇನ್‌ಫಾರ್ಮೇಷನ್ ನೆಟ್‌ವರ್ಕ್' ವೆಬ್ ಪುಟ ತೆರೆದುಕೊಳ್ಳುತ್ತದೆ. ಅದರಲ್ಲಿ 'ಸರ್ವೀಸಸ್' ಮೆನು ಕ್ಲಿಕ್ಕಿಸಬೇಕು. ನಂತರ ಅದರಲ್ಲಿ ಕಾಣುವ ಪಾನ್ (PAN) ಆಯ್ಕೆಯನ್ನು ಕ್ಲಿಕ್ ಮಾಡಬೇಕು.
- ಹಾಗೇ ಕ್ಲಿಕ್ ಮಾಡಿ ಸ್ಕ್ರಾಲ್ ಮಾಡಿದರೆ 'ಚೇಂಜ್ / ಕರೆಕ್ಷನ್ ಇನ್ ಪಾನ್ ಡಾಟಾ' ಎಂಬ ಮತ್ತೊಂದು ಆಯ್ಕೆ ಕಾಣುತ್ತದೆ. ಅದರ ಕೆಳಗಡೆ ಕಾಣುವ 'ಅಪ್ಲೈ' ಆಯ್ಕೆಯನ್ನು ಕ್ಲಿಕ್ಕಿಸಿದರೆ ಮತ್ತೊಂದು ವೆಬ್ ಪುಟ ತೆರೆದುಕೊಳ್ಳುತ್ತದೆ. ಅದರಲ್ಲಿ ಅಪ್ಲಿಕೇಷನ್ ವಿಧಾನದ ವಿಭಾಗದಲ್ಲಿ 'ಚೇಂಚಸ್ ಆರ್ ಕರೆಕ್ಷನ್ ಇನ್ ಎಕ್ಸೈಟಿಂಗ್ ಪಾನ್ ಡಾಟಾ / ರೀಪ್ರಿಂಟ್ ಆಫ್ ಪಾನ್ ಕಾರ್ಡ್ (ನೋ ಚೇಂಜಸ್ ಇನ್ ಎಕ್ಸೈಟಿಂಗ್ ಪಾನ್ ಡಾಟಾ' ಎಂಬ ಆಯ್ಕೆಯನ್ನು ಕ್ಲಿಕ್ಕಿಸಬೇಕು.
- ಬಳಿಕ ನಿಮ್ಮ ಪಾನ್ ಕಾರ್ಡ್‌ನ ಕೆಟಗೆರಿ ವಿಧಾನವನ್ನು (ವೈಯಕ್ತಿಕ) ಆಯ್ಕೆ ಮಾಡಿಕೊಂಡು ನಿಮ್ಮ ಎಲ್ಲ ವೈಯಕ್ತಿಕ ಮಾಹಿತಿಯನ್ನು ನಮೂದಿಸಿ. ಕ್ಯಾಪ್ಚಾ ಕೋಡ್ ನಮೂದಿಸಿ 'ಸಬ್ಮಿಟ್' ಆಯ್ಕೆ ಕ್ಲಿಕ್ ಮಾಡಿ. ಹಾಗೆ ಮಾಡಿದ ಬಳಿಕ ನೀವು ನೀಡಿದ ಮೇಲ್ ಐಡಿಗೆ ಒಂದು ಲಿಂಕ್ ಬರುತ್ತದೆ. ಅದನ್ನು ಕ್ಲಿಕ್ ಮಾಡುವ ಮೂಲಕ ಪಾನ್ ಕಾರ್ಡ್‌ನ ತಿದ್ದುಪಡಿ ವಿಧಾನವನ್ನು ಮುಂದುವರೆಸಬೇಕು.
- ಈ ಹಂತದಲ್ಲಿ ಬೇರೊಂದು ಪೇಜಿಗೆ ರಿಡೈರೆಕ್ಟ್ ಆದ ಮೇಲೆ 'ಸಬ್ಮಿಟ್ ಸ್ಕ್ಯಾನ್ಡ್ ಇಮೇಜಸ್ ಥ್ರೋ ಇ–ಸೈನ್ ಆನ್ ಎನ್‌ಎಸ್‌ಡಿಎಲ್ ಇ–ಗವರ್ನಮೆಂಟ್' ಕ್ಲಿಕ್ಕಿಸಿ ಅಗತ್ಯವಾದ ವಿವರಗಳನ್ನೆಲ್ಲ ತುಂಬಿ 'ನೆಕ್ಸ್ಟ್' ಆಯ್ಕೆಯನ್ನು ಕ್ಲಿಕ್ಕಿಸಿ. ಈಗ ಮತ್ತೊಂದು ಪೇಜ್‌ಗೆ ನೀವು ರಿಡೈರೆಕ್ಟ್ ಆಗುವಿರಿ. ಇಲ್ಲಿ ನಿಮ್ಮ ವಿಳಾಸವನ್ನು ಬದಲಾಯಿಸಬಹುದು. ಈ ಪೇಜಿನಲ್ಲಿ ನಿಮ್ಮ ವಿಳಾಸದ ದಾಖಲೆ, ವಯಸ್ಸಿನ ದಾಖಲೆ, ಗುರುತಿನ ದಾಖಲೆ ಹಾಗೂ ಪ್ಯಾನ್ ಈ ಎಲ್ಲ ದಾಖಲೆಗಳನ್ನು ಅಪ್ಲೋಡ್ ಮಾಡಿ.
- ನಂತರ ತೆರೆದುಕೊಳ್ಳುವ ಡಿಕ್ಲೆರೇಶನ್ ಇ–ಸಹಿ ಹಾಕಿ ಸಬ್ಮಿಟ್ ಆಯ್ಕೆಯನ್ನು ಕ್ಲಿಕ್ಕಿಸಿ. ನಂತರ 'ಪೇಮೆಂಟ್ ಗೇಟ್ ವೇ'ಗೆ ಪೇಜ್ ರಿಡೈರೆಕ್ಟ್ ಆಗುತ್ತದೆ. ಅಲ್ಲಿ ಶುಲ್ಕ ಪಾವತಿಸಿದ ನಂತರ ಸ್ವೀಕೃತಿ ಪತ್ರ ಲಭ್ಯವಾಗುತ್ತದೆ.
- ಸ್ವೀಕೃತಿ ಪತ್ರವನ್ನು ಭೌತಿಕವಾಗಿ ಪ್ರಿಂಟ್ ಹಾಕಿ ಇದರೊಂದಿಗೆ ಸಬ್ಮಿಟ್ ಮಾಡಲಾದ ಎಲ್ಲ ದಾಖಲೆಗಳನ್ನು ಲಗತ್ತಿಸಿ NSDL egov ಕಚೇರಿಗೆ ಕಳುಹಿಸಿ. ಇದರೊಂದಿಗೆ ಪಾಸ್ ಪೋರ್ಟ್ ಸೈಜಿನ ಭಾವಚಿತ್ರವೊಂದನ್ನು ಸ್ವೀಕೃತಿ ಪತ್ರದಲ್ಲಿ ತೋರಿಸಲಾದ ಜಾಗದಲ್ಲಿ ಅಂಟಿಸಿ, ಅದರ ಮೇಲೆ ಅಡ್ಡಲಾಗಿ ಸಹಿ ಮಾಡಿ ಕಳುಹಿಸುವುದನ್ನು ಮರೆಯಬೇಡಿ. ಕೆಲ ದಿನಗಳ ಬಳಿಕ ನಿಮಗೆ ತಿದ್ದುಪಡಿಯಾದ ಪಾನ್ ಕಾರ್ಡ್ ಲಭ್ಯವಾಗುತ್ತದೆ. ■

### ಆಧಾರ್ ಜೋಡಣೆಯೂ ಸುಲಭ!

ಪಾನ್ ಕಾರ್ಡ್ ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಜೋಡಿಸುವ ಪ್ರಕ್ರಿಯೆಯೂ ಸುಲಭವಾಗಿದೆ. ವೆಬ್ ಬ್ರೌಸರ್‌ನಲ್ಲಿ https://www.tinnsdl.com/ ಎಂಬ ಈ ಲಿಂಕ್ ಅನ್ನು ಟೈಪಿಸಿ ಓಪನ್ ಮಾಡಿದ ಕೂಡಲೇ ನೀವು ಪಾನ್ ಕಾರ್ಡ್ ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿದ್ದೀರಾ ಎಂಬ ಪ್ರಶ್ನೆ ಡೈಲಾಗ್ ಬಾಕ್ಸ್ ಕಂಪ್ಯೂಟರ್‌ನ ಪರದೆ ಮೇಲೆ ಕಾಣಿಸಿಕೊಳ್ಳುತ್ತದೆ. ಅದರಲ್ಲಿ ಕಾಣುವ ಕಂಟಿನ್ಯೂ ಆಯ್ಕೆಯನ್ನು ಕ್ಲಿಕ್ಕಿಸಿದರೆ ಆದಾಯ ತೆರಿಗೆ ಇಲಾಖೆಯ 'ಟ್ಯಾಕ್ಸ್ ಇನ್‌ಫಾರ್ಮೇಷನ್ ನೆಟ್‌ವರ್ಕ್' ಎಂಬ ವೆಬ್ ಪುಟ ತೆರೆದುಕೊಳ್ಳುತ್ತದೆ.

ಅದರಲ್ಲಿ ಕ್ವಿಕ್ ಲಿಂಕ್ಸ್ ಮೆನುವಿನಡಿ ಆಧಾರ್ ಪಾನ್ ಲಿಂಕಿಂಗ್ ಎಂಬ ಆಯ್ಕೆಯೊಂದು ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದರೆ ಆದಾಯ ತೆರಿಗೆ ಇಲಾಖೆಯದ್ದೇ ಆದ 'ಇ–ಫಿಲ್ಲಿಂಗ್' ವೆಬ್ ಪುಟ ತೆರೆದುಕೊಳ್ಳುತ್ತದೆ. ಅದರಲ್ಲಿ ಅಗತ್ಯ ಮಾಹಿತಿಯನ್ನು ನಮೂದಿಸಿ ಲಿಂಕ್ ಆಧಾರ್ ಎಂಬ ಆಯ್ಕೆಯನ್ನು ಕ್ಲಿಕ್ಕಿಸಿದರೆ ಜೋಡಣೆ ಕಾರ್ಯ ಮುಗಿಯುತ್ತದೆ. ಇದಕ್ಕೆ 2–3 ನಿಮಿಷವಷ್ಟೇ ತಗಲುತ್ತದೆ.